ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002.
ದೂ:080–22211730/22106460, ಇ–ಮೇಲ್:sahithya.academy@gmail.com

ಕಸಾಅ/24/ಬಿ.ಜಿ.ಎಲ್.ಅ.ಶಿ/2022–23 ದಿನಾಂಕ:07.10.2022

ಆಯ್ಕೆಯಾದ ಒಟ್ಟು 36ಜನ ಶಿಬಿರಾರ್ಥಿಗಳಿಗೆ

ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಭಾರತೀಯ ಸಾಹಸ ಸಮನ್ವಯ ಕೇಂದ್ರ, ಹೊನ್ನಮರಡು ಇವರ ಸಹಯೋಗದೊಂದಿಗೆ **ದಿನಾಂಕ:11–10–2022 ರಿಂದ ದಿನಾಂಕ:13–10–2022ರ ವರೆಗೆ ಬಿ.ಜಿ.ಎಲ್. ಸ್ವಾಮಿ ಜನ್ಮ ಶತಮಾನೋತ್ಸವ ಅಂಗವಾಗಿ ಬಿ.ಜಿ.ಎಲ್. ಸ್ವಾಮಿ ಸಾಹಿತ್ಯ ಮತ್ತು ನಿಸರ್ಗಾನುಸಂಧಾನ ಎಂಬ ಮೂರ ದಿನಗಳ ಅಧ್ಯಯನ ಶಿಬಿರವನ್ನು ಭಾರತೀಯ ಸಾಹಸ ಸಮನ್ವಯ ಕೇಂದ್ರ, ಹೊನ್ನೆಮರಡು, ಸಾಗರ, ಶಿವಮೊಗ್ಗ ಇಲ್ಲಿ ಏರ್ಪಡಿಸಲಾಗಿದೆ. ಈ ಮೂರು ದಿನಗಳ ಶಿಬಿರಕ್ಕೆ ತಮ್ಮನ್ನು ಶಿಬಿರಾರ್ಥಿಯನ್ನಾಗಿ ಆಯ್ಕೆ ಮಾಡಲಾಗಿದೆ. ಈ ಸಂಬಂಧ ಶಿಬಿರಕ್ಕೆ ತಾವು ಬರುವ ಮುನ್ನ ಮತ್ತು ಬಂದ ನಂತರ ಗಮನಿಸಬೇಕಾದ ಕೆಲವು ಮುಖ್ಯ ಸಂಗತಿಗಳು ಕೆಳಕಂಡಂತಿವೆ.**

1) ಶಿಬಿರದಲ್ಲಿ ಶಿಸ್ತು ಮತ್ತು ಸಾಮೂಹಿಕ ನಡವಳಿಕೆಯಿಂದ ಶಿಬಿರವನ್ನು ಯಶಸ್ವಿಗೊಳಿಸಬೇಕು.

2) ಶಿಬಿರಾರ್ಥಿಗಳಿಗೆ ಸರಳವಾದ ಊಟ, ತಿಂಡಿ ವ್ಯವಸ್ಥೆ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

3) ಮೂರು ದಿನಗಳು ಶಿಬಿರಾರ್ಥಿಗಳು ಕಡ್ಡಾಯವಾಗಿ ಶಿಬಿರದಲ್ಲಿ ವಾಸ್ತವ್ಯ ಮಾಡಬೇಕು. ಮಧ್ಯಂತರದಲ್ಲಿ ಯಾವುದೇ ಕಾರಣದಿಂದ ಶಿಬಿರಕ್ಕೆ ಗೈರುಹಾಜರಾದಲ್ಲಿ ಅಂತಹವರಿಗೆ ಪ್ರಯಾಣಭತ್ಯೆ, ಪ್ರೋತ್ಸಾಹಧನ ಮತ್ತು ಪ್ರಮಾಣಪತ್ರವನ್ನು ನೀಡಲಾಗುವುದಿಲ್ಲ.

4) ತಾವು ಬರುವಾಗ ಮೂರು ದಿನಗಳಿಗೆ ಅಗತ್ಯವಿರುವಷ್ಟು ಬೆಚ್ಚನೆಯ ಉಡುಪು, ಹಾಸಲು ಮತ್ತು ಹೊದಿಕೆಗಳನ್ನು ಕಡ್ಡಾಯವಾಗಿ ತರುವುದು.

5) ಮಳೆಗಾಲವಿರುವುದರಿಂದ ತಪ್ಪದೇ ಛತ್ರಿಯನ್ನು ತರತಕ್ಕದ್ದು.

6) ತಾವು ಬರುವ ಮುನ್ನ ಅಥವಾ ಬಂದಕೂಡಲೇ ಯಾವುದೇ ಅಗತ್ಯ ಮಾಹಿತಿಗೆ ಅಕಾಡೆಮಿಯ ಅಧ್ಯಕ್ಷರು –9731475901, ರಿಜಿಸ್ಟ್ರಾರ್ 9740370473, ಅಥವಾ ಅಕಾಡೆಮಿಯ ಸಿಬ್ಬಂದಿಯಾದ ಜಾವೀದ್ 9740577234 ಅವರನ್ನು ಸಂಪರ್ಕಿಸಬಹುದು.

7) ನಿಯಮಾನುಸಾರ ತಮಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ರಾಜಹಂಸ ಬಸ್ ಪ್ರಯಾಣವೆಚ್ಚ ಅಥವಾ ಸ್ಲೀಪರ್ ಕ್ಲಾಸ್ ರೈಲ್ವೆ ಪ್ರಯಾಣದರ ಹಾಗೂ ಪ್ರೋತ್ಸಾಹ ಧನವನ್ನು ಕಾರ್ಯಕ್ರಮ ಮುಗಿದ ನಂತರ ನಿಮ್ಮ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಪಾವತಿಸಲಾಗುವುದು. ಇದಕ್ಕಾಗಿ ನಿಮ್ಮ ಬ್ಯಾಂಕ್ ಖಾತೆಯ ಪಾಸ್ ಬುಕ್/ ಚೆಕ್‌ಲೀಫ್‌ನ ಜೆರಾಕ್ಸ್ ಪ್ರತಿಯನ್ನು ಶಿಬಿರದಲ್ಲಿ ಸಲ್ಲಿಸುವುದು.

8) ಶಿಬಿರಾರ್ಥಿಗಳು ತಾಳಗುಪ್ಪಕ್ಕೆ ರೈಲು ಅಥವಾ ಬಸ್ಸಿಗೆ ಬರಬಹುದು ತಾಳಗುಪ್ಪದಿಂದ ಹೊನ್ನೆಮರಡುವಿಗೆ ಅಕಾಡೆಮಿಯಿಂದ ವಾಹನ ವ್ಯವಸ್ಥೆ ಕಲ್ಪಿಸಲಾಗುವುದು.

...2/–

9) ಶಿಬಿರಾರ್ಥಿಗಳು ದಿನಾಂಕ 11.10.2022ರಂದೇ ಬರತಕ್ಕದ್ದು. ಹಿಂದಿನ ದಿನ ಬಂದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗುವುದಿಲ್ಲ

10) ಶಿಬಿರಾರ್ಥಿಗಳು ಯಾವುದೇ ಚಿನ್ನಾಭರಣಗಳು ಬೆಲೆಬಾಳುವ ವಸ್ತುಗಳು ಯಾವುದೇ ಯಾಂತ್ರಿಕ ತಾಂತ್ರಿಕ ಸಂಗೀತ ಉಪಕರಣಗಳು ಹಾಗೂ ಇನ್ನಿತರೆ ತಾಂತ್ರಿಕ ಉಪಕರಣಗಳನ್ನು ತರತಕ್ಕದ್ದಲ್ಲ.

11) ನೀರಿಗೆ ಇಳಿಯಲು ಅನುಕೂಲವಾದ ಬಟ್ಟೆಗಳನ್ನು ತರತಕ್ಕದ್ದು.

12) ಶಿಬಿರಾರ್ಥಿಗಳು ತಮ್ಮ ಜೊತೆಗೆ ಬೇರೆ ಯಾರನ್ನು ಕರೆ ತರಬಾರದು.

13) ಶಿಬಿರವು ನಡೆಯುವ ಸ್ಥಳವು ಪ್ಲಾಸ್ಟಿಕ್ ಮುಕ್ತ ಪ್ರದೇಶವಾಗಿರುವುದರಿಂದ ಯಾವುದೇ ಪ್ಲಾಸ್ಟಿಕ್ ಅನ್ನು ನಿಷೇಧಿಸಲಾಗಿದೆ.

14) ಶಿಬಿರಾರ್ಥಿಗಳು ಶಿಬಿರ ನಡೆಯುವ ಸ್ಥಳದಲ್ಲಿ ಆಯೋಜಕರು ನೀಡುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

15) ತಾವು 11.10.2022ರ ಬೆಳಗ್ಗೆ 9.00 ಗಂಟೆಯೊಳಗೆ ಭಾರತೀಯ ಸಾಹಸ ಸಮನ್ವಯ ಕೇಂದ್ರ, ಹೊನ್ನೆಮರಡು, ಸಾಗರ, ಶಿವಮೊಗ್ಗ ಇಲ್ಲಿಗೆ ಬಂದು ನೋಂದಣಿ ಮಾಡಿಸಬೇಕು.

16) ಅಗತ್ಯವಿರುವ ಮೂಲಭೂತ ಔಷಧಿಗಳನ್ನು ವೈದ್ಯರ ಸಲಹೆ ಪಡೆದು ತರಬಹುದು.

17) ಕೋವಿಡ್ ಸಂಬಂಧಿತ ಅಗತ್ಯ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. 3ದಿನಕ್ಕೆ ಬೇಕಾದ ಮಾಸ್ಕ್, ಹ್ಯಾಂಡ್ ಸ್ಯಾನಿಟೈಸರ್ ತರುವುದು.

18) ಶಿಬಿರದಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು ಹಾಗೂ ಸ್ಯಾನಿಟೈಸರ್ ಬಳಸಬೇಕು.

19) ಚರ್ಚೆ/ಸಂವಾದದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಶಿಬಿರವನ್ನು ಅರ್ಥಪೂರ್ಣಗೊಳಿಸುವಿರೆಂದು ನಿರೀಕ್ಷಿಸಲಾಗಿದೆ.

20) ಶಿಬಿರದ ಪ್ರತಿ ಗೋಷ್ಠಿಯಲ್ಲಿ ಕಡ್ಡಾಯವಾಗಿ ಶಿಬಿರಾರ್ಥಿಗಳು ಭಾಗವಹಿಸತಕ್ಕದ್ದು.

21) ಶಿಬಿರದ ಗೋಷ್ಠಿಗಳಲ್ಲಿ ಮೊಬೈಲ್ ಫೋನ್‌ಗಳ ಬಳಕೆಯನ್ನು ನಿರ್ಬಂಧಿಸಲಾಗಿದೆ.

22) ಶಿಬಿರದಲ್ಲಿ ಅನುಚಿತ ವರ್ತನೆ ಕಂಡುಬಂದಲ್ಲಿ ಅಂತಹ ಶಿಬಿರಾರ್ಥಿಗಳನ್ನು ಶಿಬಿರದಿಂದ ಹೊರಹಾಕಲಾಗುವುದು.

23) ಓ.ಓ.ಡಿ. ಪತ್ರಕ್ಕೆ ಸಂಬಂಧಿಸಿದಂತೆ, ಶಿಬಿರಾರ್ಥಿಗಳು ಸರ್ಕಾರಿ ನೌಕರರಾಗಿದ್ದ ಪಕ್ಷದಲ್ಲಿ ತಮ್ಮ ಸಂಸ್ಥೆಯಿಂದ ಪಡೆದ ಅನುಮತಿ ಪತ್ರ/ ಬಿಡುಗಡೆ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ.

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

- ವಾಸ್ತವ್ಯದ ವ್ಯವಸ್ಥೆ ಶಿಬಿರಾರ್ಥಿಗಳಿಗೆ ಮಾತ್ರ ಇರುವುದರಿಂದ ನಿಮ್ಮೊಡನೆ ನಿಮ್ಮ ಕುಟುಂಬದ **ಸದಸ್ಯರನ್ನು / ಮಕ್ಕಳನ್ನು ಕರೆತರಬೇಡಿ.** ದಯವಿಟ್ಟು ಸಹಕರಿಸಿ.